ಕೇಳಿದ್ದಾರೆ. ಇದುವರೆಗೆ ಅದರ ಪರಿಸ್ಥಿತಿ ಏನಾಗಿದೆಯೋ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಏನಾದರೂ ಇದರ ಬಗ್ಗೆ ಬೆಳಕು ಚೆಲ್ಲಬೇಕೆಂದು ನಾನು ಅವರಲ್ಲಿ ಕೇಳುತ್ತೇನೆ.

ಅಧ್ಯಕ್ಷರು:- ಅವರ ಗಮನಕ್ಕೆ ಬಂದಿಲ್ಲ; ತಿಳಿದು ಹೇಳುತ್ತಾರೆ. ನೀವು ಅದರ ಗಮನಕ್ಕೆ ತಂದಿದ್ದೀರಿ.

(2) ಬೆಳಗಾವಿ ನಗರಸಭೆ ಮೇಲೆ ಮರಾಠಿ ಧ್ವಜ ತೆಗೆಸುವುದರ ಬಗ್ಗೆ.

† ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ ನಾನು ಯಾವಾಗಲೂ ಸಭೆಯಲ್ಲಿ ಒಂದು ವಿಚಾರವನ್ನು ಹೇಳುತ್ತಿದ್ದೇನೆ. ಏನೆಂದರೆ ಬೆಳಗಾವಿ ನಗರಸಭೆಯ ಬಗ್ಗೆ ಅನೇಕ ಸಾರಿ ಹೇಳಿದ್ದೇನೆ. ಬೆಳಗಾವಿ ನಗರಸಭೆಯವರು ಏನು ನಿರ್ಣಯ ತೆಗೆದುಕೊಂಡಿದ್ದಾರೆ ಅದರ ಬಗ್ಗೆ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ ಎಂಬುದು ಗೊತ್ತಿಲ್ಲ. ಮತ್ತು ಬೆಳಗಾವಿ ನಗರಸಭೆಯ ಮೇಲೆ ಮರಾಠಿಧ್ವಜವನ್ನು ತೆಗೆಸುವುದರ ಬಗ್ಗೆ ಆರು ತಿಂಗಳುಗಳಿಂದ ಈ ಸಭೆ ಪ್ರಾರಂಭವಾಗುವುದಕ್ಕೆ ಮೊದಲಿನಿಂದಲೂ ಹೇಳುತ್ತಿದ್ದೇನೆ. ಮಾನ್ಯ ಸಂಸದೀಯ ಸಚಿವರು ಮೂರು ಬಾರೀ ಹೇಳಿದರು. ಎಲ್ಲರಿಗೂ ಅನ್ವಯವಾಗುವಂತೆ ಒಂದು ಕಾಯಿದೆಯನ್ನು ತರುತ್ತೇವೆ, ಆ ಕಾಯಿದೆಯನ್ನು ಈ ಸಭೆ ಮುಗಿಯುವುದರೊಳಗೆ ಅದನ್ನು ಮಂಡಿಸುತ್ತೇವೆಂದು ಹೇಳಿದರು. ಇವತ್ತು ಸಭೆ ಮುಗಿಯುತ್ತಾ ಇದೆ. ಇದುವರೆಗೆ ಏನು ತೀರ್ಮಾನವನ್ನು ಸರ್ಕಾರದಲ್ಲಿ ತೆಗೆದುಕೊಂಡಿದ್ದೀರಿ ಎಂಬುದು ಗೊತ್ತಾಗುತ್ತಿಲ್ಲ. ಆವರ ಆ ನಿರ್ಣಯದ ಬಗ್ಗೆ ಯೋಚಿಸಿದ್ದೀರಾ? ಬೆಳಗಾವಿ ನಗರಸಭೆಯ ಕಟ್ಟಡದ ಮೇಲಿರುವ ಮರಾಠಿ ಧ್ವಜವನ್ನು ತೆಗೆಸುವ ಬಗ್ಗೆ ಸರ್ಕಾರದ ನಿಲುವೇನು? ಇಲ್ಲಿ ಮುಖ್ಯಮಂತ್ರಿಗಳಿದ್ದಾರೆ. ಸಂಸದೀಯ ಸಚಿವರು ಸಹ ಇಲ್ಲಿದ್ದಾರೆ. ಇವತ್ತು ಅಧಿವೇಶನ ಮುಕ್ತಾಯವಾಗುತ್ತಿದೆ. ಅದನ್ನು ದಯಮಾಡಿ ತಿಳಿಸಬೇಕು.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಮಾನ್ಯ ಅಧ್ಯಕ್ಷರೆ, ನಾನು ಏತಕ್ಕೆ ಎದ್ದು ನಿಂತುಕೊಂಡೆ ಅಂದರೆ, ಲಾಕಪ್ ಸಾವಿನ ಬಗ್ಗೆ ಮಾನ್ಯ ಸದಸ್ಯರೊಬ್ಬರು ಹಿಂದೆ ಒಂದು ಪ್ರಶ್ನೆಯನ್ನು ಕೇಳಿದ್ದರು. ಅದನ್ನು ತಡೆಹಿಡಿಯುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ಎನ್ನುವ ಪ್ರಶ್ನೆ ಕೇಳಿದ್ದರು. ಅದಕ್ಕೆ ಉತ್ತರ ಏನು ಬಂದಿತ್ತು ಎಂದರೆ, ಸತ್ತಮೇಲೆ ಏನು ಕ್ರಮ ತೆಗೆದುಕೊಂಡಿದ್ದೇವೆ ಎಂಬ ಬಗ್ಗೆ ಸನ್ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದರು. ನಾನು ಎದ್ದುನಿಂತಿರುವ ಉದ್ದೇಶ ಇಷ್ಟೆ. ಲಾಕಪ್‌ನಲ್ಲಿ ನಾವುಗಳು ಆಗದೇ ಇರುವ ರೀತಿಯಲ್ಲಿ ನಾನು ಕ್ರಮ ತೆಗೆದುಕೊಳ್ಳಬೇಕು. ಆದಕ್ಕೆ ನಾವು ಕ್ರಿಮಿನಲ್ ಪ್ರೊಸಿಜರ್ ಕೋಡ್‌ನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ತಮ್ಮ ಗಮನಕ್ಕೆ ಬಂದಿರಬೇಕು, ನಾನು ಒಂದು ಖಾಸಗಿ ಮಸೂದೆಯನ್ನು ಕಳಿಸಿಕೊಟ್ಟಿದ್ದೇನೆ. ಅದು ಏನೋ ಗೊತ್ತಿಲ್ಲ, ಅದು ಈ ಅಧಿವೇಶನದಲ್ಲಿ ಬಂದಿಲ್ಲ. ಇದು ಕ್ರಿಮಿನಲ್ ಪ್ರೊಸಿಜರ್ ಕೋಡ್‌ನ ಸೆಕ್ಷನ್ 41ಕ್ಕೆ ತಿದ್ದುಪಡಿ ಆಗಬೇಕೆಂದು ನಾನು ಸಾಕಷ್ಟು ಮೊದಲೇ ನೋಟೀಸ್ ಕೊಟ್ಟು ಕಳಿಸಿದ್ದೆ. ಏಕೆಂದರೆ, ಇದು ಮೂಲಭೂತ ಹಕ್ಕಿಗೆ ಸಂಬಂಧಪಟ್ಟ ಪ್ರಶ್ನೆ.

ಅಧ್ಯಕ್ಷರು:- ಖಾಸಗಿ ನಿರ್ಣಯ?

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಪ್ರೈವೇಟ್ ಬಿಲ್. ನಿರ್ಣಯ ಅಲ್ಲ. ಅದನ್ನು ಕಳಿಸಿಕೊಟ್ಟಿದ್ದೆ, ಅದು ಅಚ್ಚಾಗಿಯೂ ಬಂತು. ತಮ್ಮ ಕಚೇರಿಗೆ ಅಚ್ಚಾಗಿ ಬಂದಿದೆ. ಆದರೆ ಇಲ್ಲಿ ಸದನಕ್ಕೆ ಬರಲಿಲ್ಲ. ಇದರ ಬಗ್ಗೆ ಕಾನೂನು ಮಂತ್ರಿಗಳ ಜೊತೆಯಲ್ಲಿ ಕೂಡ ನಾನು ಮಾತನಾಡಿದ್ದೇನೆ. ಇದು ಬಹಳ ಮುಖ್ಯವಾದ ತಿದ್ದುಪಡಿ; ಇಡೀ ಇಂಡಿಯಾ ದೇಶದಲ್ಲೇ ಇದು ಆಗಬೇಕು. ಕರ್ನಾಟಕದಲ್ಲಿ ನಾವು ಇದನ್ನು ಮಾಡಬೇಕು; ಈ ತಿದ್ದುಪಡಿಯಲ್ಲಿ ಏನಿಲ್ಲ, ಈ ಲಾಕಪ್‌ನಲ್ಲಿ ಸಾವು ಆಗದೇ ಇರುವ ರೀತಿಯಲ್ಲಿ ತಡೆಯುವುದಕ್ಕೆ ಒಂದು ಸಣ್ಣ ಬದಲಾವಣೆ ಅಷ್ಟೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಪೋಲೀಸ್ ಮಂತ್ರಿಗಳು ಮತ್ತೆ ಕಾನೂನು ಮಂತ್ರಿಗಳು ಇರುವುದರಿಂದ ಇದರ ಪ್ರಾಮುಖ್ಯತೆಯ ಬಗ್ಗೆ ಹೇಳುತ್ತಿದ್ದೇನೆ. It is a simple amendment to Section 41 of the

Criminal Procedure Code wherein when a police officer arrests a person, he has just to give in writing the time, date and place of arrest to the person who is arrested so that he can hand over the slip to any of his friends and go with the police officer. ಇಷ್ಟು ಮಾಡಿದರೆ ಸಾಕು. ತಕ್ಷಣ ನಾವು ಕಾನೂನಿನ ಕ್ರಮ ತೆಗೆದುಕ್ಕೊಳ್ಳಬಹುದು. ಏಕೆ ನಾನು ಕೊಟ್ಟದ್ದೇನೆ ಎಂದರೆ ನಮ್ಮ ಹಳ್ಳಿಗಳಲ್ಲಿ ಇದು ಆಗುತ್ತಿರುವುದು. ಯಾವನೋ ಒಬ್ಬ ದಫೇದಾರ್ ಬಂದು ಎಳೆದುಕೊಂಡು ಹೋಗುತ್ತಾನೆ. ಯಾವಾಗ ಎಳೆದುಕೊಂಡು ಹೋದ, ಎಲ್ಲಿಗೆ ಎಳದುಕೊಂಡು ಹೋದ, ಆತ ಏನಾದ ಎನ್ನುವುದು ಗೊತ್ತಾಗುವುದಿಲ್ಲ. ಆದಕಾರಣ, ನಾನು ತಮ್ಮ ಮೂಲಕ ಮಾನ್ಯ ಕಾನೂನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮುಂದಿನ ಅಧಿವೇಶನದಲ್ಲಾದರೂ ಈ ಮಸೂದೆ ಬರಬೇಕು.

ಅಧ್ಯಕ್ಷರು:- ಆಗಬಹುದು. ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್:- ಈಗ ನಾನು....

ಅಧ್ಯಕ್ಷರು:- ಆ ಬಗ್ಗೆ ಹೇಳ್ತಾರೆ ನೋಡಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಏನು ಪ್ರಸ್ತಾಪ ಮಾಡಿದ್ದಾರೆ, ಅದು ಈ ಸದನದಲ್ಲಿ ಅನೇಕ ಸಾರಿ ಬಂದಿತ್ತು. ಈ ಬಗ್ಗೆ ರಾಷ್ಟ್ರಧ್ವಜಕ್ಕೆ ಅನುಗುಣವಾಗಿ ಕೇಂದ್ರಸರ್ಕಾರದ ಶಾಸನ ಇದೆ. ಆದರೆ ಸ್ಥಳೀಯ ಸಂಸ್ಥೆಗಳು ಯಾವ ರೀತಿ ಧ್ವಜ ಉಪಯೋಗ ಮಾಡಬೇಕು ಎಂಬುದಕ್ಕೆ ರಾಜ್ಯಮಟ್ಟದಲ್ಲಿ ಯಾವುದೇ ಶಾಸನ ಇಲ್ಲ. ಅಥವಾ ಸ್ಥಳೀಯ ಸಂಸ್ಥೆಗಳ ಮುನಿಸಿಪಾಲಿಟಿ ಆಕ್ಟ್ ಅಥವಾ ಜಿಲ್ಲಾ ಪರಿಷತ್ ಆಕ್ಟ್‌ನಲ್ಲಿ ಕೂಡ ಇದಕ್ಕೆ ಯಾವುದೇ ರೀತಿಯಾದ ಒಂದು ಶಾಸನ ಇಲ್ಲ. ಈಗ ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡ ಈ ವಿಚಾರದಲ್ಲಿ ನಮ್ಮ ಕಾನೂನು ಇಲಾಖೆಗೆ ಬರೆದಿದ್ದಾರೆ. ಕಾನೂನು ಇಲಾಖೆಯವರು ಯಾವರೀತಿ ಇದನ್ನು ಪ್ರತ್ಯೇಕವಾಗಿ ಕಾನೂನು ಮಾಡಿ, ಏನಾದರೂ ಇದರ ಬಗ್ಗೆ ಯೂನಿಫಾರಂ ಸಿಸ್ಟಮ್ ಅಡಾಪ್ಟ್ ಮಾಡುವ ವ್ಯವಸ್ಥೆ ಮಾಡಬೇಕೇ ಅಥವಾ ಸ್ಥಳೀಯ ಸಂಸ್ಥೆಗಳ, ಜಿಲ್ಲಾ ಪರಿಷತ್ ಆಕ್ಟ್ ಅಥವಾ ಮುನಿಸಿಪಾಲಿಟಿ ಆಕ್ಟ್‌ನಲ್ಲಿ ಅಥವಾ ಕಾರ್ಪೊರೇಷನ್ ಆಕ್ಟ್‌ಗೆ ಏನಾದರೂ ತಿದ್ದುಪಡಿ ಮಾಡಿ ಅಥವಾ ಏನಾದರು ನಿಯಮಗಳನ್ನು ಮಾಡಿ ಮಾಡಬೇಕೇ ಎಂದು ಗಂಭೀರವಾಗಿ ಆಲೋಚನೆ ಮಾಡುತ್ತಿದ್ದೇವೆ. ಏಕೆಂದರೆ ತಕ್ಷಣ ಇದನ್ನು ತಂದರೆ ನಾಳೆ ಇದರ ಬಗ್ಗೆ ಕೋರ್ಟಿಗೆ ಹೋಗುವಂತಿರಬಾರದು. ಆದ್ದರಿಂದ ಸರ್ಕಾರ ಇದರ ಬಗ್ಗೆ ಸುಮ್ಮನೆ ಕುಳಿತುಕೊಂಡಿಲ್ಲ, ಈ ಬಗ್ಗೆ ಗಂಭೀರವಾದ ಆಲೋಚನೆ ಮತ್ತು ಚಿಂತನೆ ಆಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್:- ಹೌದು ಸರ್ಕಾರ ಸುಮ್ಮನೆ ಕುಳಿತುಕೊಂಡಿಲ್ಲ, ನಿದ್ದೆ ಮಾಡುತ್ತಿದೆ ಎಂದು ನನಗೆ ಗೊತ್ತು. ಅಧ್ಯಕ್ಷರೇ, ಒಂದು ತಮಗೆ ಹೇಳುತ್ತಿದ್ದೇನೆ. ಇದೇ ಸಭೆಯಲ್ಲಿ ಇದೇ ಸಚಿವರು ಮೂರು ಬಾರಿ ಹೇಳಿದ್ದಾರೆ, ನಾವು ಇದರ ಬಗ್ಗೆ ಒಂದು ಕಾಯಿದೆ ತಂದೇ ತರುತ್ತೇನೆ. ಬೇರೆ ಮಾತೇ ಇಲ್ಲ ಎಂದು. ಅವರು ಸ್ಪಷ್ಟವಾದ ನುಡಿಯಲ್ಲಿ, ಸ್ಪಷ್ಟವಾದ ಮಾತಿನಲ್ಲಿ ಹೇಳಿದ್ದಾರೆ. ಈಗ ಮತ್ತೆ ತಿರುಗಿ ಯೋಚನೆ ಮಾಡುತ್ತಿದ್ದೇವೆ, ನ್ಯಾಯಾಂಗ ಇಲಾಖೆಗೆ ಕಳಿಸಿದ್ದೇವೆ ಎಂದು ಹೇಳುವುದು ಸರಿಯಲ್ಲ. ಇದು ನಿಜವಾಗಿಯೂ ನೀವು ಒಂದು ರೀತಿಯಲ್ಲಿ ಕರ್ನಾಟಕಕ್ಕೆ ದ್ರೋಹ ಬಗೆಯುತ್ತಿದ್ದೀರಿ, ಕನ್ನಡ ನಾಡಿಗೆ ದ್ರೋಹ ಬಗೆಯುತ್ತಿದ್ದೀರಿ. ಇವತ್ತು ತಾವು ಹೇಳಬೇಕು. ನಿಟ್ಟುನಿಲುವಿನಲ್ಲಿ, ಹೇಳಬೇಕು. ಬೆಳಗಾವಿ ನಗರಸಭೆಯ ಮೇಲೆ ಮರಾಠಿ ಧ್ವಜ ತೆಗೆಯುವ ಬಗ್ಗೆ ನಿಟ್ಟು ನಿಲುವಿನಲ್ಲಿ ತಾವು ಹೇಳಬೇಕು. ಇದರ ಬಗ್ಗೆ ಇವತ್ತು ತೀರ್ಮಾನ ಕೊಡಲಿಲ್ಲ ಎಂದರೆ ನಾನು ಮತ್ತೆ ಧರಣಿ ಮಾಡಬೇಕಾಗುತ್ತದೆ. ಇದು ಸರಿಯಲ್ಲ. ಇದು ಸರಿಯಾದ ನೀತಿ ಆಲ್ಲ, ದಯಮಾಡಿ ಹೇಳಿ. ಕನ್ನಡ ನಾಡಿಗೆ, ಕನ್ನಡಕ್ಕೆ ಗೌರವ ತರುವ ರೀತಿಯಲ್ಲಿ ಹೇಳಬೇಕು. ಈ ಸದನವನ್ನು ತಪ್ಪು ದಾರಿಗೆ ಎಳೆಯುವುದು ಬೇಡ, ಈ ಸದನಕ್ಕೆ ಸತ್ಯಕ್ಕೆ ದೂರವಾದ ಮಾತು ಹೇಳುವುದು ಬೇಡ. ಅಧ್ಯಕ್ಷರೇ, ರಾಮಮಹಾರಾಜರ ಬಾವುಟಗಳೂ ಹೋದವು. ಈ ರಾಷ್ಟ್ರಧ್ವಜ ಪಕ್ಕದಲ್ಲಿ ಮರಾಠಿ

ಧ್ವಜ ಇರಬಾರದು ಎನ್ನುವ ಮಾತನ್ನು, ತಾವು ಸಹ ಆಪ್ಷಣ್ ಕೊಡಿಸಿರುವಾಗ. ಈ ರೀತಿ ಇವರು ತಪ್ಪಿಸಿಕೊಳ್ಳುವಂಥ, ಸುತ್ತಿ ಬಳಸುವ ನಿರ್ಧಾರಕ್ಕೆ ಬರಬಾರದು, ದಯಮಾಡಿ ಹೇಳಿ.

ಅಧ್ಯಕ್ಷರು:- ಸರ್ಕಾರ ತೀರ್ಮಾನ ತೆಗೆದುಕೊಂಡು, ಒಂದು ನಿರ್ಧಾರ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರಲ್ಲ.

ಶ್ರೀ ವಾಟಾಳ್ ನಾಗರಾಜ್:- ಆರು ತಿಂಗಳಿಂದ ಮೂರು ಬಾರಿ ಇದೇ ಮಾತನ್ನು ಹೇಳುತ್ತಿದ್ದಾರೆ, ಇದೇ ಮಾತನ್ನು ಆಡುತ್ತಿದ್ದಾರೆ ಇದು ಸಮಂಜಸವಾದ ಉತ್ತರ ಆಲ್ಲ. ಸರ್ಕಾರ ತೆಗೆದುಕೊಳ್ಳತಕ್ಕ ನಿರ್ಧಾರ ಇದೇ?

ಶ್ರೀ ಕೆ. ಲಕ್ಕಪ್ಪ:- ಅಧ್ಯಕ್ಷರೇ, ಈ ಸಭೆಯು ಈ ದಿವಸ ಮುಕ್ತಾಯವಾಗುತ್ತದೆಂದು ಕೇಳಿದ್ದೇನೆ. ಇಲ್ಲಿ ಆನೇಕ ವಿಚಾರಗಳನ್ನು ಚರ್ಚೆ ಮಾಡಿದ್ದೇವೆ, ಬಹಳ ಪ್ರಮುಖವಾದ ವಿಚಾರಗಳ ಬಗ್ಗೆ ಈ ಸದನದ ಎಲ್ಲಾ....

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ, ಈ ಬಗ್ಗೆ ಒಂದು ನಿರ್ಧಾರಕ್ಕೆ ಬರಬೇಕು, ಇಲ್ಲದೇ ಹೋದರೆ ನಿಮ್ಮ ಮುಂದೆ ಬಂದು ಕುಳಿತುಕೊಳ್ಳಬೇಕಾಗುತ್ತದೆ. ನನಗೆ ಬೇರೆ ವಿಧಿಯೇ ಇಲ್ಲ. ತಾವು ಏನು ತಿಳಿದುಕೊಂಡರೂ ಚಿಂತೆ ಇಲ್ಲ, ನಾನು ಆರು ತಿಂಗಳಿಂದ ಒಂದೇ ಸಮನಾಗಿ ಕೇಳುತ್ತಿದ್ದೇನೆ.

ಅಧ್ಯಕ್ಷರು:-- ನಾನು ಏನೂ ತಿಳಿದುಕೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಾನು ಇಲ್ಲಿ ಸಭಾಧ್ಯಕ್ಷನಾಗಿ, ಇಲ್ಲಿ ಕಾರ್ಯಕಲಾಪಗಳ ರೂಲ್ಸ್ ಏನಿದೆ, ಆದರ ಪ್ರಕಾರ ಸಭೆ ನಡೆಸುವುದೊಂದೇ ನನಗಿರತಕ್ಕ ಕೆಲಸ. ಆದ್ದರಿಂದ ನಾನು ತಪ್ಪು ತಿಳಿದುಕೊಳ್ಳುವುದೂ ಇಲ್ಲ, ಒಪ್ಪು ತಿಳಿದುಕೊಳ್ಳುವುದೂ ಇಲ್ಲ. ನಾನು ಈ ನಿರ್ಧಾರಕ್ಕೆ ಬಂದಿದ್ದೇನೆ. ನೀವು ಪ್ರಶ್ನೆ ಎತ್ತಬೇಕೆಂದು ನನ್ನನ್ನು ಬಂದು ಕೇಳಿದಿರಿ, ನಾನು ಅವಕಾಶ ಕೊಟ್ಟೆ, ಸರ್ಕಾರದವರು ಉತ್ತರ ಕೊಟ್ಟದ್ದಾರೆ. ಇನ್ನು ಮುಂದಿರತಕ್ಕಂತಾದ್ದು, ನಿಮ್ಮದು ಮತ್ತು ಸರ್ಕಾರದ್ದು. ನನ್ನ ಜವಾಬ್ದಾರಿ ಏನಿಲ್ಲ...

(ಈ ಪಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ಅವರು ಸಭಾಧ್ಯಕ್ಷರ ಪೀಠದ ಬಳಿ ಬಂದು ಧರಣಿ ಕುಳಿತರು.)

ಶ್ರೀ ಕೆ. ಲಕ್ಕಪ್ಪ:- ಮಾನ್ಯ ಅಧ್ಯಕ್ಷರೇ, ಈ ಸಭೆಗೆ ಆರಿಸಿ ಬರಲು ಅವಕಾಶ ಮಾಡಿಕೊಟ್ಟಂಥ ಮತದಾರರ ಬಗ್ಗೆ ಅವರ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಈ ಸಭೆಯಲ್ಲಿ ಒಂದು ದಿವಸವೂ ಚರ್ಚೆ ಮಾಡಲಿಲ್ಲ. ಈ ಬಗ್ಗೆ ನಾನು ಆನೇಕ ಸಲ ತಮ್ಮ ಗಮನ ಸೆಳೆದೆ. ಹಳೆಯ ಮೈಸೂರು ಭಾಗದಲ್ಲಿ ವಿಪರೀತ ಅಭಾವ ಪರಿಸ್ಥಿತಿ ಇದೆ, ಕೆಲವು ಭಾಗದಲ್ಲಿ ಮಳೆಯಾಗಿ ತೊಂದರೆ ಇಲ್ಲದಿರಬಹುದು. ಆದರೆ ಹಳೆಯ ಮೈಸೂರು ಭಾಗದಲ್ಲಿ ಬಹಳ ಅಭಾವ ಪರಿಸ್ಥಿತಿ ಇದೆ, ಬಿತ್ತನೆ ಕೆಲಸಗಳು ಆಗಿಲ್ಲ, ಕೆಲಸಗಳು ದೊರಕುತ್ತಾ ಇಲ್ಲ. ಜೊತೆಗೆ ಜಿಲ್ಲಾಪರಿಷತ್ ಸಂಸ್ಥೆಗಳಲ್ಲಿಯೂ ಕೂಡ, ಪಣ ಇಲ್ಲದೇ ಕೆಲಸ ಒದಗಿಸುವುದಕ್ಕೆ ಆಗುತ್ತಿಲ್ಲ. ಈ ಬಗ್ಗೆ ಒಂದು ದಿವಸದ ಚರ್ಚೆಗೆ ತಾವು ಅವಕಾಶ ಕೊಡಬಹುದಿತ್ತು. ಆದರೆ, ಆನೇಕ ಒತ್ತಡಗಳ ಕಾರಣ, ಸಮಯ ಇಲ್ಲದೇ ಕೊಟ್ಟಿಲ್ಲವೆಂದು ಕಾಣುತ್ತದೆ. ಈಗಲಾದರೂ ಸರ್ಕಾರ ಕೊನೆ ದಿವಸವಾದರೂ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಿ, ಇಲ್ಲದಿದ್ದರೆ ಈ ಸಭೆಗೆ ಆಶ್ವಾಸನೆ ಕೊಟ್ಟು ಕಾಮಗಾರಿ ಕೆಲಸಗಳು, ಹುಲ್ಲು, ನೀರು, ವ್ಯವಸ್ಥೆಗಳು ನಮ್ಮ ಜನರಿಗೆ ಸಿಗತಕ್ಕ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಆಸಕ್ತಿ ವಹಿಸತಕ್ಕಂಥ ಒಂದು ಭರವಸೆಯನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥನೆ ಮಾಡುತ್ತಿದ್ದೇನೆ.

† ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಎತ್ತಿರತಕ್ಕ ಪ್ರಶ್ನೆಯ ವಿಚಾರದಲ್ಲಿ ಅವರು ಸ್ವಲ್ಪ ಮುಂದೆ ಹೋಗಿದ್ದಾರೆ. ಏಕೆಂದರೆ ಬೆಳಗಾಂ ಬಗ್ಗೆಯಾಗಲೀ, ಗಡಿ ಬಗ್ಗೆಯಾಗಲೀ, ನಮಗೂ ಆಷ್ಟೇ ಕುತೂಹಲ ಇದೆ, ಕಳಕಳಿ ಇದೆ. ಕನ್ನಡ ರಾಷ್ಟ್ರ ಮತ್ತು ಕನ್ನಡ ರಾಜ್ಯ, ಕನ್ನಡ ದೇಶ ಇವುಗಳ ಬಗ್ಗೆ ನಮಗೂ ಆಷ್ಟೇ ಆಭಿಮಾನ ಇದೆ, ಕಳಕಳಿ ಇದೆ; ಇದನ್ನು ರಕ್ಷಿಸಬೇಕು, ಉಳಿಸಬೇಕು ಎನ್ನುವುದರ ಬಗ್ಗೆ ಅವರಿಗಿಂತ ಕಡಿಮೆ ಕಳಕಳಿ ಏನೂ ಇಲ್ಲ. ಮಾನ್ಯ ಸಚಿವರು ಏನು ಪ್ರಸ್ತಾಪ ಮಾಡಿದರು ಅಂದರೆ, ಸ್ಥಳೀಯ ಸಂಸ್ಥೆಗಳು ತಮ್ಮ ಕಟ್ಟಡದ ಮೇಲೆ ಧ್ವಜ ಹಾಕತಕ್ಕಂಥ ವಿಚಾರದಲ್ಲಿ ಕಾನೂನಿನಲ್ಲಿ ಒಂದು ನಿಯಂತ್ರಣ

ಮಾಡುವುದರಲ್ಲಿ ಬಲ ಇಲ್ಲ; ಆದಕ್ಕಾಗಿ ಈಗಿರುವ ಕಾನೂನಿನ ಬಗ್ಗೆ ಏನಾದರೂ ನಿಯಂತ್ರಣ ತರುವುದಕ್ಕೆ ಆಲೋಚನೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಆದರೂ ಅವರಿಗೆ ಸಮಾಧಾನ ಆಗದೆ ಧರಣಿ ಮಾಡಿದ್ದಾರೆ, ಧರಣಿ ಮಾಡುವುದರಿಂದ ಇದು ಬಗೆಹರಿಯುವುದಿಲ್ಲ. ನಮ್ಮ ಬೆಂಗಳೂರು ಕಾರ್ಪೊರೇಷನ್‌ನವರೂ ಅವರದೇ ಆದಂಥ ಧ್ವಜ ಇಟ್ಟುಕೊಂಡಿದ್ದಾರೆ. ಇದಕ್ಕೆ ಕಾನೂನು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದ್ದರಿಂದ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಬೆಳಗಾಂನ ಕಾರ್ಪೊರೇಷನ್ನಿನ ಆಡಳಿತವನ್ನು ನಡೆಸುವುದರಿಂದ, ಬಹಳ ದಿವಸಗಳಿಂದ ಈ ಪ್ರಶ್ನೆ ಇದೆ. ಅಂತಿಮವಾಗಿ ಚರ್ಮಗೀತೆಯನ್ನು ಹಾಡಬೇಕಾದ ಅಗತ್ಯ ಇರುವುದರಿಂದ, ಒಂದು ಕಾನೂನನ್ನು ತಂದು ಸ್ಥಳೀಯ ಸಂಸ್ಥೆಗಳು ತಮ್ಮದೇ ಆದ ಧ್ವಜವನ್ನು ಹೊಂದುವುದಕ್ಕೆ ಅವಕಾಶ ಇದೆಯೇ? ಒಂದು ವೇಳೆ ಇದ್ದರೆ, ಕಾನೂನು ಪ್ರಕಾರ ಅಧಿಕಾರ ಕೊಡುವುದು ಸೂಕ್ತವಾಗಿದೆ. ಇದನ್ನು ಅಂತಿಮವಾಗಿ ಬಗೆಹರಿಸಬೇಕಾದ ಅಗತ್ಯ ಇದೆ. ಏಕೆಂದರೆ ಒಂದು ಧ್ವಜವನ್ನು ಹಾರಿಸಿಕೊಂಡು ತಮ್ಮದೇ ಸಾರ್ವಭೌಮತ್ವ ಇದೆ, ರಾಜ್ಯ ಇದೆ, ಹೇಗೆ ಬೇಕಾದರೂ ಆಳಬಹುದು ಎಂಬುದು ಎಂ.ಇ.ಎಸ್. ಸ್ನೇಹಿತರಿಗೆ ಬಂದಿದ್ದರೆ, ಅದು ತಪ್ಪು. ಅದು ಕನ್ನಡದ ನೆಲ. ಕನ್ನಡದ ನೆಲವನ್ನು ರಕ್ಷಣೆ ಮಾಡತಕ್ಕಂಥ ಅಧಿಕಾರ ಈ ಸದನಕ್ಕೆ ಇದೆ. ಪ್ರತಿಯೊಬ್ಬ ಕನ್ನಡದ ಪ್ರಜೆಗೂ ಇದೆ. ಅದನ್ನು ಮಾಡಲೇ ಬೇಕು. ಆದುದರಿಂದ ನಾನು ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಕಳಕಳಿಯಿಂದ ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುವುದು ಏನೆಂದರೆ ನಾವೆಲ್ಲರೂ ಸೇರಿ ಕನ್ನಡ ನಾಡಿನ ರಕ್ಷಣೆ ಮಾಡತಕ್ಕ ಪ್ರಯತ್ನ ಒಂದಾಗಿ ಮಾಡೋಣ. ಆದುದರಿಂದ ದಯವಿಟ್ಟು ಅವರು ತಮ್ಮ ಸ್ಥಾನಕ್ಕೆ ಬಂದು ಕುಳಿತುಕೊಳ್ಳಬೇಕು. ಜೊತೆಗೆ ನಮ್ಮ ಕಾನೂನು ಸಚಿವರಲ್ಲಿ ತಮ್ಮ ಮುಖಾಂತರ ನಾನು ಕೇಳಿಕೊಳ್ಳುವುದು ಏನೆಂದರೆ, ಬೇಗ ಒಂದು ಶಾಸನವನ್ನು ತರತಕ್ಕಂಥ ಕೆಲಸ ದಯವಿಟ್ಟು ಮಾಡಬೇಕು. ಪದೇ ಪದೇ ಇಂತಹ ಒಂದು ಪ್ರಶ್ನೆಯನ್ನು ಈ ಸದನದಲ್ಲಿ ಎತ್ತಿ ಚರ್ಚೆ ಮಾಡುವುದಕ್ಕೆ ಅವಕಾಶ ಇರದ ರೀತಿಯಲ್ಲಿ ಮುಕ್ತಾಯ ಹಾಡುವುದಕ್ಕೆ ಕಾನೂನು ಸಚಿವರು ಒಂದು ಶಾಸನವನ್ನು ದಯವಿಟ್ಟು ಬೇಗ ತೆಗೆದುಕೊಂಡು ಬರಬೇಕು. ಸಾಧ್ಯವಾದರೆ, ಈ ದಿನ ಶಾಸನಸಭೆ ಮುಕ್ತಾಯವಾಗುತ್ತಿದೆ, ಕೊನೆಯ ಹಂತದಲ್ಲಿ ಇದೆ. ಆದರೆ ಮತ್ತೆ ಸಭ್ಯದಲ್ಲಿಯೇ ಸೇರಲಿದ್ದೇವೆ. ಆದುದರಿಂದ ಬೇಗ ಒಂದು ಶಾಸನವನ್ನು ತರಬೇಕೆಂದು ಕೇಳುತ್ತೇನೆ.

† ಶ್ರೀ ಪಿ.ಜಿ.ಆರ್. ಸಿಂಧ್ಯ:– ಈಗ ಸ್ನೇಹಿತರಾದಂಥ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಇಲ್ಲಿ ಧರಣಿ ಕುಳಿತಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗಾಗಲೀ, ಸರಕಾರಕ್ಕಾಗಲೀ ಗಡಿ ರಕ್ಷಣೆ ಬಗ್ಗೆ ಗಡಿ ವಿಚಾರದಲ್ಲಿ ಬೇರೆ ಅಭಿಪ್ರಾಯ ಇದೆ ಎಂದು ನಾನು ಹೇಳುವುದಿಲ್ಲ. ನಮ್ಮಷ್ಟೇ ಕಳಕಳಿ ಅವರಿಗೂ ಸಹಿತ ಇದೆ. ಮಾನ್ಯ ಮುಖ್ಯಮಂತ್ರಿಗಳು ಚುನಾವಣೆ ಆದ ನಂತರ ಸ್ಪಷ್ಟವಾಗಿ ಈ ವಿಚಾರ ಹೇಳಿದ್ದಾರೆ. ಆದರೆ ಮಾನ್ಯ ನಾಗರಾಜ್‌ರವರು ಕಳೆದು ಆರು ತಿಂಗಳಿನಿಂದ ಸತತವಾಗಿ ಮೂರು ನಾಲ್ಕು ಸಾರಿ ಅಧಿವೇಶನ ನಡೆದ ಸಂದರ್ಭದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ಬೆಂಗಳೂರು ನಗರ ಕಾರ್ಪೊರೇಷನ್‌ನವರು ತಮ್ಮ ಧ್ವಜ ಹಾಕಿಕೊಳ್ಳುವುದಕ್ಕೂ, ಬೆಳಗಾಂ ಕಾರ್ಪೊರೇಷನ್‌ನವರು ಅಲ್ಲಿ ಒಂದು ಧ್ವಜ ಹಾಕಿಕೊಳ್ಳುವುದಕ್ಕೂ ಬಹಳ ವ್ಯತ್ಯಾಸ ಇದೆ. ಬೆಳಗಾಂನಲ್ಲಿ ಚುನಾಯಿತರಾಗಿರುವವರು ಬೇರೆ ಭಾವನೆಗಳಿಂದ ಅದನ್ನು ಹಾಕಿಕೊಂಡಿರುವುದರಿಂದ ಇದನ್ನು ವಿರೋಧ ಮಾಡತಕ್ಕದ್ದು ಇದೆ. ನಾನಾದರೂ ಈ ಸಂದರ್ಭದಲ್ಲಿ ಕೇಳಿಕೊಳ್ಳತಕ್ಕದ್ದು, ಮಾನ್ಯ ನಾಗರಾಜ್‌ರವರ ಭಾವನೆಗಳು ಏನಿದೆ, ಅವರ ಜೊತೆಯಲ್ಲಿ ನಾವೂ ಇದ್ದೇವೆ. ಆಡಳಿತ ಪಕ್ಷದವರು, ವಿರೋಧ ಪಕ್ಷದವರು ಎಲ್ಲ ಒಟ್ಟಾಗಿ ಸೇರಿ ನಾಡನ್ನು, ಗಡಿಯನ್ನು ರಕ್ಷಣೆ ಮಾಡುವುದರಲ್ಲಿ ಯಾರೂ ಸಹಿತ ಹಿಂದೆ ಬೀಳುವುದಿಲ್ಲ ಎಂಬ ಮಾತನ್ನು ಹೇಳುತ್ತೇನೆ ಆದರೆ ಒಂದು ಮಾತನ್ನು ಮಾನ್ಯ ಸಭಾನಾಯಕರು ಇರುವುದರಿಂದ ಹೇಳುತ್ತೇನೆ, ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ಚಟುವಟಿಕೆಯಿಂದ ವಿರೋಧ ಪಕ್ಷದಲ್ಲಿ ಕೆಲಸ ಮಾಡತಕ್ಕವರು ಕಳೆದ ಒಂದೂವರೆ ತಿಂಗಳ ಕಾಲದಲ್ಲಿ ಈ ಸದನ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ಅವರು ಸಾಕಷ್ಟು ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಕೊನೆಯ ದಿನ ಅವರು ಧರಣಿ ಕುಳಿತುಕೊಂಡಾಗ ಸಭೆ

ಮುಗಿಯಿತು ಎಂದು ಹೇಳತಕ್ಕದ್ದು ಒಳ್ಳೆಯ ಲಕ್ಷಣ ಅಲ್ಲ ಎಂದು ನಾನು ತಿಳಿದಿದ್ದೇನೆ. ಮಾನ್ಯ ಸಭಾನಾಯಕರು ಈ ಸಂದರ್ಭದಲ್ಲಿ ಇರುವುದರಿಂದ ಸ್ಪಷ್ಟವಾಗಿ ಹೇಳಬೇಕು. ಬರುವ ಆಗಸ್ಟ್‌ನಲ್ಲಿ ಮತ್ತೆ ಅಧಿವೇಶನ ಸೇರುತ್ತದೆ ಎನ್ನುವ ವಿಚಾರವನ್ನು ನಾವು ಕೇಳಿದ್ದೇವೆ. ಆ ಅಧಿವೇಶನದಲ್ಲಾದರೂ ಅದನ್ನು ತೆಗೆದುಕೊಂಡು ಬರತಕ್ಕದ್ದು, ಒಳ್ಳೆಯದು. ಕಾನೂನಿನ ಅಡಚಣೆಗಳು ನಮಗೆ ಅರ್ಥವಾಗಿವೆ. ಆದರೂ ಸ್ಪಷ್ಟವಾಗಿ ಹೇಳಿದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಹಿಂದಕ್ಕೆ ಬರುತ್ತಾರೆ ಎಂದು ನಾನು ತಿಳಿದಿದ್ದೇನೆ. ಆದ್ದರಿಂದ ಮಾನ್ಯ ಸಭಾನಾಯಕರು ಮತ್ತು ತಾವು ಸಹಕಾರ ಕೊಡಬೇಕೆಂದು ಹೇಳುತ್ತೇನೆ.

† ಶ್ರೀ ಎಸ್.ಹೆಚ್. ಕೌಜಲಗಿ:– ಸನ್ಮಾನ್ಯ ಅಧ್ಯಕ್ಷರೇ, ಹೋದ ಅಧಿವೇಶನದಲ್ಲಿ ಹಾಗೂ ಇದೇ ಅಧಿವೇಶನದಲ್ಲಿ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹಾಗೂ ನಾನು ಈ ಬೆಳಗಾವಿ ನಗರಸಭೆಯ ಮೇಲೆ ಹಾರಿಸಿರುವ ಭಗವಾ ಝಂಡಾ ತೆಗೆಸುವ ಸಲುವಾಗಿ ಎರಡುಮೂರು ಸಲ ವಿಷಯ ಎತ್ತಿದ್ದೇವೆ. ಆಕಾಲಕ್ಕೆ ಸಂಸದೀಯ ವ್ಯವಹಾರಗಳ ಮಂತ್ರಿಗಳಾದ ಶ್ರೀಮಾನ್ ವೀರಪ್ಪಮೊಯಿಲಿಯವರು ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಇದೇ ಅಧಿವೇಶನ ಮುಗಿಯುವುದರೊಳಗೆ ಒಂದು ಬಿಲ್ ತಂದು ಇದರ ಬಗ್ಗೆ ಕೂಡಲೆ ನಿರ್ಣಯ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದರು. ಆದರೆ ಸನ್ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಇವತ್ತಿನವರೆಗೆ ಆಕ್ಟ್‌ನ್ನು ಅಥವಾ ಬಿಲ್ಲನ್ನು ತಂದಿರುವುದಿಲ್ಲ. ಇವತಿತಿನ ದಿವಸ ಏನಾಗಿದೆ ಎಂದರೆ, ನಿಪ್ಪಾಣಿಯಲ್ಲಿ ಐ ಕಾಂಗ್ರೆಸ್ ಅಧಿಕಾರದಲ್ಲಿ ಬಂದಿದೆ. ಅವರೂ ಸಹಿತ ಮರಾಠಾ ಝಂಡಾ ಹಚ್ಚಿದರು. ಇದರ ಬಗ್ಗೆ ಸರಕಾರದವರು ನನಗೆ ಇವತ್ತಿನ ದಿವಸ ಕಳುಹಿಸಿದ ಉತ್ತರದಲ್ಲಿ ಇದೆ. ತಾವೇ ಇದನ್ನು ಬೇಕಾದರೆ ನೋಡಬಹುದು. ಏನಾಗುತ್ತದೆ ಎಂದರೆ ಯಾರು ಏನು ಬೇಕಾದರೂ ಮಾಡಿಕೊಂಡು ಹೋಗುವಂತಹ ಒಂದು ಕಾಲ ಬರುತ್ತದೆ. ಒಂದು ಅಲ್ಲೋಲಕಲ್ಲೋಲ ಸ್ಥಿತಿ ಶುರುವಾಗುತ್ತೆ. ಯಾರದ್ದು ನಡೆಯುತ್ತದೆ ಅವರು ನಡೆಸಿಕೊಳ್ಳಬಹುದು, ಯಾರು ಪುಕ್ಕಲು ಇದ್ದಾರೆ, ಅವರದ್ದು ನಡೆಯುವುದಿಲ್ಲ ಎಂಬ ಪರಿಣಾಮ ಬರುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು:– ಆಯಿತು ಹೇಳಿದರಲ್ಲ.

ಶ್ರೀ ಎಸ್.ಹೆಚ್. ಕೌಜಲಗಿ:– ಇವತ್ತು ನಿಪ್ಪಾಣಿಯಲ್ಲಿ ಈ ರೀತಿ ಆಗಿದೆ. ಸರಕಾರ ಏತಕ್ಕೆ ಕಾಯಿದೆ ತರಬೇಕು ಎಂದರೆ, ನಿಪ್ಪಾಣಿಯಲ್ಲಿ ತಮ್ಮಪಕ್ಷದಲ್ಲಿ ಇದ್ದಂಥವರೇ ಇವತ್ತಿನದಿವಸ ಭಗವಝಂಡಾ ಏರಿಸಿದ್ದಾರೆ. ಸರಕಾರದವರು ಇವತ್ತಿನ ದಿವಸ ನನಗೆ ಉತ್ತರ ಕಳುಹಿಸಿದ್ದಾರೆ. ಆ ಉತ್ತರ ಸಹಿತ ತಮಗೆ ಕಳುಹಿಸಿಕೊಡುತ್ತೇನೆ. ಆದಕಾರಣ ಸರಕಾರಕ್ಕೆ ಕನ್ನಡ ನಾಡು ನುಡಿ ಬಗ್ಗೆ ಅಭಿಮಾನ ಇತ್ತು ಎಂದರೆ ಆ ಆಕ್ಟ್ ಅನ್ನು ಆದಷ್ಟು ಬೇಗ ತರಬೇಕು.

ಇಲ್ಲವಾದರೆ ಯಾಪುದೇ ಪ್ರಯೋಜನ ಆಗುವುದಿಲ್ಲ. ಯಾರು ಏನು ಬೇಕಾದರೂ ಮಾಡಿ ಕೊಂಡು ಹೋಗುವ ಪ್ರಸಂಗ ಬರುತ್ತದೆ. ಇವತ್ತಿನದಿವಸ ಬಾಬಾಗೌಡರು ಇದ್ದಾರೆ. ಅವರು ಏತಕ್ಕೆ ಹಸಿರು ಝಂಡಾವನ್ನು ವಿಧಾನಸೌಧದ ಮೇಲೆ ಹಾರಿಸಬಾರದು ಎಂದು ಹೇಳುತ್ತಾರೆ. ಇವತ್ತು ಹಸಿರು ಝಂಡಾವನ್ನು ವಿಧಾನಸೌಧದ ಮೇಲೆ ಏರಿಸುವುದು ರೈತಸಂಘದ ಉದ್ದೇಶವಾಗಿದೆ. ಆ ಒಂದು ಉದ್ದೇಶದ ಮೇಲೆ ನಾವು ಹಸಿರು ಝಂಡಾವನ್ನು ವಿಧಾನಸೌಧದ ಮೇಲೆ ಏರಿಸೇ ತಿರುತ್ತೇವೆ ಎಂದು ಅವರು ಕೇಳಬಹುದು. ಆದಕಾರಣ ಅವರ ವಿಚಾರ ಇದ್ದುದನ್ನು ಅವರು ಏತಕ್ಕೆ ಮಾಡಬಾರದು ಎಂದು ಕೇಳಿಕೊಳ್ಳಬಹುದು. ಆದಕಾರಣ ಇವತ್ತಿನ ದಿವಸ ಬಹಳ ಗಂಭೀರವಾಗಿ ಪರಿಗಣಿಸಿ ಪ್ರತಿಯೊಂದು ಕಡೆ ಇದು ಮಾಡುವುದಕ್ಕೆ ಹೊರಟ್ಟಿದ್ದಾರೆ. ನಿಪ್ಪಾಣಿ ಆಯಿತು, ಬೆಳಗಾಂ ಆಯಿತು, ಬೆಂಗಳೂರು ಆಯಿತು. ಎಲ್ಲಾ ಕಡೆ ಈ ಪ್ರಕಾರ ಆಗಬಾರದು. ಸರ್ಕಾರದವರು ಕೂಡಲೆ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

12.20. ಪಿ.ಎಂ.

SRI K.C. MODGEKAR DESAI :- Speaker Sir, it is politically motivated and it is a pity and a miserable thing that some Hon. Members are raising this matter regarding Bhagawa Jhanda. They don't know the actual facts as to from where Bhagawa Jhanda starts. You might have known that Chatrapathi Shivaji has fought with foreign rulers i.e., Mughals and Britishers. From that day, the Bhagawa Jhanda is there. In Belgaum City Corporation since 1950 this Bhagawa Jhanda is there. For the information of the House, I say when one Mr. Kanbargi was the President of that Corporation, at that time, this Bhagawa Jhanda was there and it shows the integrity and sacrifice to the nation. Therefore, there is a Flag law in the Central Government also. This State Government also should consult the Central Government.

MR. SPEAKER :- Mr. Desai, Government will look into this.

† ಶ್ರೀ ವೀರೇಂದ್ರಪಾಟೀಲ್(ಮುಖ್ಯ ಮಂತ್ರಿಗಳು) :- ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು ಹೇಳುತ್ತೇನೆ. ಇವತ್ತು ನಿಜವಾಗಿಯೂ ಬಿಜಿನೆಸ್ ಇರಲಿಲ್ಲ. ನಿನ್ನೆಯೇ ಮುಗಿದು ಹೋಗಬೇಕಿತ್ತು. ಆ ಒಂದು ಪರಿಸ್ಥಿತಿಯಲ್ಲಿ ನಾವೆಲ್ಲರೂ ಇದ್ದೆವು. ಆದರೆ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ವಿರೋಧಪಕ್ಷದ ಕೆಲವು ಸದಸ್ಯರು ನಾವು ಇನ್ನು ಒಂದು ವಿಷಯವನ್ನು ಚರ್ಚೆ ಮಾಡುವಂತಹ ವಿಚಾರ ಉಳಿದುಕೊಂಡುಬಿಟ್ಟಿದೆ ಅದಕ್ಕೆ ಇವತ್ತು ಒಂದು ದಿವಸ ಕೊಡಬೇಕೆಂದು ಹೇಳಿದಾಗ ನಾನು ವಿರೋಧಪಕ್ಷದ ನಾಯಕರ ಮತ್ತು ವಿರೋಧಪಕ್ಷದ ಸದಸ್ಯರ ಮನಸ್ಸು ನೋಯಿಸಬಾರದು ಎನ್ನುವ ದೃಷ್ಟಿಯಿಂದ ಇವತ್ತು ಕೂರುವುದಕ್ಕೆ ನಾವು ಒಪ್ಪಿಕೊಂಡೆವು. ನಾವು ಯಾವ ಒಂದು ಉದ್ದೇಶಕ್ಕೆ ಇವತ್ತು ಸೇರಿದ್ದೇವೆ, ಆ ಒಂದು ಐಟಂ ಇನ್ನೂ ಚರ್ಚೆಗೆ ಬರಲೇ ಇಲ್ಲ. ಈ ಮಧ್ಯೆಯಲ್ಲಿ ಶ್ರೀಮಾನ್ ಪಾಟೀಳ್ ನಾಗರಾಜ್‌ರವರು ಬೆಲ್‌ನಲ್ಲಿ ಬಂದು ಕುಳಿತು ಕೊಂಡಿದ್ದಾರೆ. ಇವತ್ತು ಶ್ರೀಮಾನ್ ಪಾಟೀಳ್ ನಾಗರಾಜ್‌ರವರಿಗೆ ಆಗಲಿ ಈ ಸದನದ ಮಾನ್ಯ ಸದಸ್ಯರು ಯಾರೇ ಆಗಲಿ ಅಥವಾ ಕನ್ನಡದ ಜನತೆಗೆ ಆಗಲಿ ನಾನು ಹೇಳುವುದು ಇಷ್ಟೇ, ಬೆಳಗಾಂ ಬಗ್ಗೆ ಗಡಿ ಬಗ್ಗೆ ಪಾಟೀಳ್ ನಾಗರಾಜ್‌ರವರಿಗೆ ಎಷ್ಟು ಅಭಿಮಾನ ಇದೆ, ಎಷ್ಟು ಭಕ್ತಿ ಇದೆ, ಎಷ್ಟು ಶ್ರದ್ಧೆ ಇದೆ ಬಹುಶಃ ಅದಕ್ಕಿಂತ ಹೆಚ್ಚು ಇರಲಿಕ್ಕೆ ಇಲ್ಲದಿದ್ದರೂ ಅದಕ್ಕಿಂತ ಕಡಿಮೆ ಏನು ಇಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ಅವರಿಗೆ ಇರತಕ್ಕಂಥ ಅಭಿಮಾನ ನಮಗೂ ಇದೆ. ನಾವು ಸಹ ಅಚ್ಚ ಕನ್ನಡಿಗರೇ ಇದ್ದೇವೆ. ಅದರಲ್ಲಿ ಒಂದು ಪರ್ಸೆಂಟ್ ಕಡಿಮೆ ಇಲ್ಲ. ಅವರ ಕನ್ನಡತನಕ್ಕಿಂತ ನಮ್ಮ ಕನ್ನಡತನ ಏನೂ ಕಡಿಮೆ ಇಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಆದರೆ ಒಂದು ವ್ಯತ್ಯಾಸ ಏನೆಂದರೆ ಅವರು ಅಲ್ಲಿ ಕುಳಿತುಕೊಂಡು ಮಾತನಾಡುತ್ತಾರೆ. ನಾವು ಒಂದು ಗೌರ್ನಮೆಂಟ್ ಆಗಿ ಮಾತನಾಡುತ್ತಿದ್ದೇವೆ. ನಾವು ಏನು ಮಾತನಾಡಬೇಕಾಗಿದ್ದರೂ ಸಹ ಒಂದು ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಏನು ಕಾರ್ಯಕ್ರಮ ತೆಗೆದುಕೊಂಡರೂ ಸಹ ಅದು ಕಾನೂನುಬದ್ಧವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅವರು ಬೆಲ್‌ನಲ್ಲಿ ಕುಳಿತುಕೊಂಡಿದ್ದಾರೆ ಎಂದು ನಾನು ಬೆಲ್‌ನಲ್ಲಿ ಬಂದು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಬಹುಶಃ ಅವರು ಎಷ್ಟೇ ಪ್ರಚೋದನೆ ಇದ್ದರೂ ನಾನು ಆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆ ಒಂದು ಝಂಡಾ ಬೆಳಗಾಂ ಕಾರ್ಪೋರೇಷನ್ ಕಟ್ಟಡದ ಮೇಲೆ ಏನು ಹಾರಾಡುತ್ತಿದೆ. ಅದು ನಾವು ಅಧಿಕಾರಕ್ಕೆ ಬಂದ ಮೇಲೆ ಆ ಝಂಡಾ ಅಲ್ಲಿ ಹಾರಾಡುತ್ತಿದ್ದರೆ ಅವರು ನಮ್ಮನ್ನು ಬೈಯ್ಯಬಹುದಾಗಿತ್ತು. ಬಹುಶಃ ಮಾನ್ಯ ವಿರೋಧಪಕ್ಷದಸದಸ್ಯರಾದ ಶ್ರೀಮಾನ್ ಕೌಜಲಗಿಯವರಿಗೆ ಆ ಝಂಡಾ ಎಷ್ಟು ವರ್ಷಗಳಿಂದ ಹಾರಾಡುತ್ತಿದೆ ಎಂಬುದು ಗೊತ್ತು. ನನಗನಿಸುತ್ತದೆ ಬಹುಶಃ ಸುಮಾರು 30 ವರ್ಷಗಳಿಂದ ಹಾರಾಡುತ್ತಿರಬಹುದು; ನನಗೆ ಗೊತ್ತಿಲ್ಲ ನಾನು ಪರೀಕ್ಷೆ ಮಾಡಿಸುತ್ತೇನೆ. ನಾನು ಕೇಳಿದ ಹಾಗೆ

ಸುಮಾರು 1958-60ನೇ ಇಸವಿಯಿಂದ ಆ ಒಂದು ಭಗವತ್ ಝಂಡಾ ಆದರ ಮೇಲೆ ಹಾರಾಡುತ್ತಿದೆ. ಆ ಭಗವತ್ ಝಂಡಾ ಅಲ್ಲಿ ಹಾರಾಡುತ್ತಿರುವುದರಿಂದ ಬೆಳಗಾಂ ಮಹಾರಾಷ್ಟ್ರಕ್ಕೆ ಸೇರಿದ ಒಂದು ಪ್ರದೇಶ ಆಯಿತು ಎನ್ನುವ ಒಂದು ಪ್ರಶ್ನೆ ಇದೆ. ಇವತ್ತು ಆ ಒಂದು ವಾತಾವರಣ ಇದೆ. ಯಾವುದೋ ಒಂದು ಸಣ್ಣದ್ದರಿಂದ ವಾತಾವರಣ ಕೆಡಿಸಲು ಪ್ರಯತ್ನ ಮಾಡುವವರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಇವತ್ತು ನಾನು ಯಾರ ಮೇಲೂ ದೋಷರೋಪಣೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಒಂದು ಒಂದು ಸಣ್ಣ ಘಟನೆಯಿಂದ ಆದರ ಪರಿಣಾಮ ಏನಾಯಿತು ಎಂದು ಹೇಳುತ್ತೇನೆ ನಾನು ಆವರ ಹೆಸರು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಅವರು ಕನ್ನಡದ ಬಗ್ಗೆ ಅಭಿಮಾನ ಇದ್ದವರು, ಅವರು ಬೆಳಗಾಂ ಕಾರ್ಪೋರೇಷನ್‌ನಲ್ಲಿ ಎಲ್ಲ ವ್ಯವಹಾರ ಕನ್ನಡದಲ್ಲಿ ಆಗುತ್ತಿದೆಯೇ ಇಲ್ಲವೇ ಎನ್ನುವುದನ್ನು ನೊಡಲಿಕ್ಕೆ ಹೋದಾಗ ಘರ್ಷನೆಗಳು ಆದವು. ಆದರ ಪರಿಣಾಮ ಮುಂದೆ ಏನಾಯಿತು ಎಂದು ತಮಗೆಲ್ಲರಿಗೂ ಗೊತ್ತಿದೆ. ಇದು ಜನತಾದಳ ಸರ್ಕಾರವಿದ್ದಾಗ ಆಯಿತು. ನಾನು ಹೇಳುವುದು ಇಷ್ಟೇ ನಮ್ಮ ರಾಜ್ಯದಲ್ಲಿ ಆಗಲಿ ನಮ್ಮ ರಾಷ್ಟ್ರದಲ್ಲಿಯೇ ಆಗಲಿ, ಸ್ವಲ್ಪ ಸ್ವಲ್ಪ ಪ್ರಚೋದನೆಯಿಂದ ಇಲ್ಲಿ ಅಶಾಂತಿ ಉಂಟಾಗುವ ಪರಿಸ್ಥಿತಿ ಇದ್ದಾಗ ನಾವು ಜಾಗರೂಕರಾಗಿ ಹೋಗಬೇಕಾಗುತ್ತದೆ. ಆದರಲ್ಲೂ ಈ ಒಂದು ಪ್ರಶ್ನೆ ಬಂದಾಗ ಮಾನ್ಯ ವಾಟಾಳ್ ನಾಗರಾಜ್ ರವರು ಹಿಂದಿನವರು ಗಡಿ ರಕ್ಷಣೆ ಮಾಡಿದರು, ಬೆಳಗಾಂ ರಕ್ಷಣೆ ಮಾಡಿದರು, ಕರ್ನಾಟಕದ ಹಿತ ರಕ್ಷಣೆ ಮಾಡಿದರು ಆದರೆ ನೀವೆಲ್ಲಾ ಕಡೆಗಣಿಸುತ್ತಿದ್ದೀರಿ ಎನ್ನುವ ಧೋಷಕ್ಕೆ ಆವರು ನನ್ನನ್ನು ಗುರಿ ಮಾಡಿದರೆ ಆದಕ್ಕೆ ನಾನು ಏನಾದರೂ ಹೇಳಬಹುದು. ಇದು ಅನೇಕ ವರ್ಷಗಳಿಂದ ನಡೆಯುತ್ತಿದೆ. ಆದರೆ ಮೇಲೆ ಯಾವ ಧ್ವಜ ಏರಬೇಕು, ಯಾವುದು ಏರಬಾರದು, ಅದಕ್ಕೂ ಕೂಡ ಒಂದು ರೀತಿಯಿಂದ ಒಂದು ಪದ್ಧತಿಯಿಂದ ಒಂದು ಕಾನೂನು ಮಾಡಿ, ಆದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಆಗುವಂತಿಲ್ಲ. ಆದು ನಾವಾಗಿಯೇ ಮಾಡಲಿಕ್ಕೆ ಆಗುವಹಾಂಗೂ ಇಲ್ಲ. ಏಕೆಂದರೆ ಧ್ವಜ ಆಂದ ಮೇಲೆ ಕೇಂದ್ರ ಸರ್ಕಾರದ ಜೊತೆಯಲ್ಲೂ ಕೂಡಾ ನಾವು ಸಮಾಲೋಚನೆ ಮಾಡಿ ಆದನ್ನು ನಾವು ಮಾಡಬೇಕಾಗುತ್ತದೆ. ಆಮೇಲೆ, ಆವರು ಮೊನ್ನೆ ಒಂದು ಠರಾವು ಪಾಸ್ ಮಾಡಿದ್ದಾರೆ. ಆದು ನಮಗೆ ಗೊತ್ತಿದೆ. ಇದರ ಬಗ್ಗೆ ನಾವು ನಮ್ಮ ಅಧಿಕಾರಿಗಳನ್ನು ಸಂಪರ್ಕಿಸಿದ್ದೇವೆ. ಆವರು ಒಂದು ಠರಾವು ಪಾಸ್ ಮಾಡಿದರೆ ಏನೂ ಆಗುವುದಿಲ್ಲವೆಂದು ಮಾನ್ಯ ವಾಟಾಳ್ ನಾಗರಾಜ್‌ರವರು ತಿಳಿದುಕೊಳ್ಳಬೇಕು. ಮುನಿಸಿಪಾಲಿಟಿಗಳು ಯಾವ ತರಹ ಕೆಲಸ ಮಾಡುತ್ತವೆಂದು ಆವರಿಗೂ ಗೊತ್ತಿದೆ. ಅಲ್ಲಿ ಒಂದು ಠರಾವು ಪಾಸ್ ಮಾಡಿದ ಕೂಡಲೇ ಆದು ಠರಾವು ಆಗುವಹಾಂಗಿಲ್ಲ. ಮುಂದಿನ ಸಭೆಯಲ್ಲಿ ಬಂದು ಆದು ಫ್ರೊಸೀಡಿಂಗ್ಸ್‌ನಲ್ಲಿ ಕನ್‌ಫರ್ಮ್ ಆಗಬೇಕು. ಆದು ಆಗುವುದಕ್ಕೆ ಟೈಮ್ ಹಿಡಿಯುತ್ತದೆ. ಆದಾದಮೇಲೆ ನಮ್ಮ ಹತ್ತಿರ ಬಂದಾಗ ನಾವು ಆ ಕಾರ್ಪೊರೇಷನ್‌ನವರಿಗೆ ಸ್ಪಷ್ಟವಾಗಿ ಆವರಿಗೆ ಶೋಕಾಸ್ ನೋಟೀಸ್ ಕೊಟ್ಟಿದ್ದೇವೆ. ಈ ಬಗ್ಗೆ, ಪ್ರೊಸೀಜರ್ ಫಾಲೋ ಮಾಡದೆ ನಾವು ಸುಮ್ಮನೆ ನಿಮ್ಮ ಠರಾವು ಕ್ಯಾನ್ಸಲ್ಡ್ ಎಂದು ಹೇಳಿದರೆ ಆದು ಬಹುಶಃ ಯೋಗ್ಯವಾದುದಾಗುವುದಿಲ್ಲ. ಈಗಾಗಲೇ ಶೋಕಾಸ್ ನೋಟೀಸ್ ಕೊಟ್ಟಿರುವುದಲ್ಲದೆ ಇದರ ಜೊತೆಗೆ ನಮ್ಮ ಕಾರ್ಪೊರೇಷನ್ ಕಮಿಷನರ್‌ರವರಿಗೆ ಹೇಳಿದ್ದೇವೆ, ಈ ಠರಾವಿನ ಮೇಲೆ ನೀವು ಯಾವುದೇ ಮುಂದಿನ ಕ್ರಮ ತೆಗೆದುಕೊಳ್ಳತಕ್ಕದ್ದಲ್ಲ; ಇದರ ಬಗ್ಗೆ ಸರ್ಕಾರದಲ್ಲಿ ವಿಚಾರ ಮಾಡುತ್ತಿದ್ದೇವೆ ಎಂದು ನಮ್ಮ ಶೋಕಾಸ್ ನೋಟೀಸ್‌ಗೆ ಎಕ್ಸಪ್ಲನೇಷನ್ ಬಂದ ಮೇಲೆ ಆದನ್ನು ಕ್ಯಾನ್ಸಲ್ ಮಾಡಬೇಕಾ ಆಥವಾ ಆದು ಏನಾಗುತ್ತದೆಂಬುದು ನಿಮಗೂ ಗೊತ್ತಿದೆ. ಆವರೇನೂ ಈ ತರದ ಠರಾವನ್ನು ಹೊಸದಾಗಿ ಮಾಡುತ್ತಿಲ್ಲ. ಪ್ರತಿ ಸಲವೂ ಈ ಠರಾವು ಮಾಡುತ್ತಲೇ ಇದ್ದಾರೆ. ಆ ಠರಾವನ್ನು ನಾವು ಕ್ಯಾನ್ಸಲ್ ಮಾಡಿಕೊಂಡೇ ಹೋಗುತ್ತಿದ್ದೇವೆ, ಆದರೆ ಕ್ಯಾನ್ಸಲ್ ಮಾಡುವ ಮುನ್ನಾ ಒಂದು ಪದ್ಧತಿ ಮೇಲೆ ಮಾಡಬೇಕಾಗುತ್ತದೆ. ಏನು ಪ್ರೊಸೀಜರ್ ಮತ್ತು ಫಾರ್ಮಾಲಿಟಿಸ್ ಇದೆಯೋ ಆದನ್ನು ಮುಗಿಸಲಾರದೆ ಒಮ್ಮಿಂದೊಮ್ಮೆಗೆ ಮಾಡುತ್ತೇವೆಂದು ತರಾತುರಿಯಿಂದ ಮಾಡಿದರೆ ಆದು ಕೆಟ್ಟುಹೋಗುತ್ತದೆ. ಯಾವುದೇ ಒಂದು ಕೆಲಸ ಮಾಡಬೇಕಾಗಿದ್ದರೆ ಕಾನೂನು ಬದ್ಧವಾಗಿ ಮಾಡಬೇಕು.

ನಾವು ತಪ್ಪು ದಾರಿಯಲ್ಲಿ ಹೋಗುತ್ತಿದ್ದೇವೆ ಎನ್ನುವಂಥ ಒಂದು ಧೋಷಕ್ಕೆ ಗುರಿಯಾಗಬಾರದೆನ್ನುವ ದೃಷ್ಟಿಯಲ್ಲಿ ನಾವು ಮಾಡುತ್ತಿದ್ದೇವೆ. ಮತ್ತೊಮ್ಮೆ ಮಾನ್ಯ ವಾಟಾಳ್‌ನಾಗರಾಜ್‌ರವರಿಗೆ ಒಂದು ಅಭಿವಚನ ಕೊಡುತ್ತೇನೆ. ಬೆಳಗಾಂ ರಕ್ಷಣೆ, ಗಡಿ ರಕ್ಷಣೆಯಲ್ಲಿ ನಿಮ್ಮ ಜೊತೆಯಲ್ಲಿ ನಾವಿದ್ದೇವೆ, ನಮ್ಮ ಜೊತೆಯಲ್ಲಿ ನೀವು ಇದ್ದೀರಿ. ಆದಕ್ಕಾಗಿ ಇದರ ಬಗ್ಗೆ ವಾದವಿವಾದ, ತಕರಾರು ಬೇಡ. ಇದರ ಬಗ್ಗೆ ವಾತಾವರಣ ಕೆಡುವಂಥ ಪರಿಸ್ಥಿತಿ ಉಂಟು ಮಾಡುವುದಕ್ಕೆ ನಾವೂ ನೀವೂ ಭಾಗಿಗಳಾಗಬಾರದು. ಆದಕ್ಕಾಗಿ, ಕೊನೆ ದಿವಸ ಮಾನ್ಯ ವಾಟಾಳ್‌ನಾಗರಾಜ್‌ರವರು ವೆಲ್ ನಲ್ಲಿ ಕೂತು ಮನೆಗೆ ಹೋದರು ಅನ್ನುವಂಥ ಕೆಟ್ಟ ಹೆಸರು ನಿಮಗೂ ಬರುತ್ತದೆ. ಆದಕ್ಕೆ ಅವಕಾಶ ಕೊಡಲಾರದೆ ತಾವು ಎದ್ದು ತಮ್ಮ ಪೀಠಕ್ಕೆ ಹೋಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ:- 5 ನೇ ತಾರೀಖಿನ ನಿಷ್ಪಾಣಿಯಲ್ಲೂ ಠರಾವು ಮಾಡಿದ್ದಾರೆ. ಇದು ಹೊಸದಾಗಿ ಮಾಡಿದ್ದಲ್ಲ. ಬೆಳಗಾಂನಲ್ಲಿ ಬಾವುಟ ನಡುವೆ ಇದ್ದಿರಲಿಕ್ಕೆ ಇಲ್ಲ. ಒಂದು ವರ್ಷದಿಂದ ಏರಿಸಿದ್ದಾರೆ. ಇವತ್ತು ನಿಮ್ಮ ಪಕ್ಷದವರು ಅಧಿಕಾರಕ್ಕೆ ಬಂದ ಸಲುವಾಗಿ ನಿಷ್ಪಾಣಿಯಲ್ಲಿ ಈ ರೀತಿ ಮಾಡಿದ್ದಾರೆ. ಇವತ್ತಿನ ದಿವಸ ಈ ಉತ್ತರವನ್ನು ನೀವೇ ಕಳುಹಿಸಿದ್ದೀರಿ. ಇದನ್ನು ತಾವೇ ಓದಿನೋಡಿ (ಉತ್ತರದ ಪ್ರತಿಯನ್ನು ಮಾನ್ಯ ಮುಖ್ಯ ಮಂತ್ರಿಯವರಿಗೆ ಕಳುಹಿಸಿಕೊಟ್ಟರು) ತಾವು ಇದನ್ನು ನೋಡಿದರೆ ತಮಗೇ ಗೊತ್ತಾಗುತ್ತದೆ. 5 ನೇ ತಾರೀಖಿನಲ್ಲಿ ಮಾಡಿದ್ದಾರೆ ನಿಮ್ಮ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಇದನ್ನು ಮಾಡಿದ್ದಾರೆ. ಯಾರು ಏನು ಬೇಕಾದರೂ ಮಾಡುವುದಕ್ಕಾಗುತ್ತದೆಯೇ? ಇದು ಹಿಂದೆ ಇದ್ದಿರಲಿಕ್ಕೆ ಇಲ್ಲ. ಯಾವ ಪ್ರಕಾರ ನಿಷ್ಪಾಣಿಯಲ್ಲಿ ಸಸ್ಪೆಂಡ್ ಮಾಡಿದ್ದರೋ ಆದೇ ರೀತಿ ಬೆಳಗಾಂ ಕಾರ್ಪೊರೇಷನ್‌ನಲ್ಲೂ ಮಾಡಬೇಕಲ್ಲಾ? ನಿಮ್ಮ ಪಕ್ಷದವರು ಮೆಜಾರಿಟಿ ಇದ್ದಾರೆಂದು ಏನುಬೇಕಾದರೂ ಮಾಡಬಹುದೇ?

ಶ್ರೀ ವೀರೇಂದ್ರಪಾಟೀಲ್:- ನಾನು ಹೇಳಿದ್ದನ್ನು ನೀವು ಕೇಳಲಿಲ್ಲ. ನಾವು ಅವರಿಗೆ ಶೋಕಾಸ್ ನೋಟೀಸ್ ಕೊಟ್ಟಿದ್ದೇವೆ. ನಮ್ಮ ಶೋಕಾಸ್ ನೋಟೀಸ್‌ಗೆ ಅವರಿಂದ ಉತ್ತರ ಬಂದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಯಾವುದಾದರೂ ರೆಸಲ್ಯೂಷನ್ ಕ್ಯಾನ್ಸಲ್ ಮಾಡಬೇಕಾಗಿದ್ದರೆ ಮುನಿಸಿಪಾಲಿಟಿ ಆಕ್ಟ್‌ನಲ್ಲಿ ಒಂದು ಪ್ರೊಸೀಜರ್ ಇದೆ. ಆ ಪ್ರೊಸೀಜರ್ ಪ್ರಕಾರ ನಾವು ಮಾಡಬೇಕಾಗುತ್ತದೆ. ಶೋಕಾಸ್ ನೋಟೀಸ್‌ನ್ನು ಈಗಾಗಲೇ ಕೊಟ್ಟಿದ್ದೇವೆ. ಶೋಕಾಸ್ ನೋಟೀಸ್‌ಗೆ ಅವರು ಏನು ಉತ್ತರ ಕೊಡುತ್ತಾರೆ ಎಂದು ನಾವು ನಿರೀಕ್ಷೆ ಮಾಡುತ್ತೇವೆ. ಉತ್ತರ ಬಂದರೆ ಸರಿ, ಉತ್ತರ ಬರದಿದ್ದರೆ ನಿಷ್ಪಾಣಿಯಲ್ಲಿ ಯಾವ ರೀತಿ ಮಾಡಿದ್ದೇವೋ ಅದೇ ರೀತಿ ಇಲ್ಲಿಯೂ ಮಾಡುತ್ತೇವೆ.

ಶ್ರೀ ಎಸ್.ಹೆಚ್. ಕೌಜಲಗಿ:- ಬೆಳಗಾವಿಯಲ್ಲಿ ವಿದ್ಯಾರ್ಥಿಗಳಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಹೇಳುವುದಾದರೆ 100 ಜನ ಕನ್ನಡ ಹುಡುಗರಿಗೆ ಒಬ್ಬ ಉಪಾಧ್ಯಾಯರಿದ್ದರೆ 10 ಜನ ಮರಾಠಿ ಹುಡುಗರಿಗೆ ಒಬ್ಬ ಉಪಾಧ್ಯಾಯರಿದ್ದಾರೆ.

SRI K.C. MODAGEKAR DESAI : - We are not against Kannadigas.....

MR. SPEAKER:- I know that you are not against Mr. Koujalagi

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಮಾನ್ಯ ಮುಖ್ಯಮಂತ್ರಿಯವರು ಕೊಟ್ಟ ವಿವರಣೆ ಮೇಲೆ ಒಂದು ಭಾಗದಲ್ಲಿ ಸಮಾಧಾನವಾಗಿದೆ. ಇನ್ನೊಂದು ಭಾಗದಲ್ಲಿ ಸಮಾಧಾನವಾಗಬೇಕಾಗಿರುವುದು ಏನೆಂದರೆ, ಆಲ್ಲಿನ ಮಹಾನಗರ ಸಭೆಯ ಮೇಲೆ ಹಾರಿಸಲ್ಪಡುತ್ತಿರುವ ಧ್ವಜವನ್ನು ತೆಗೆಸುವ ಬಗ್ಗೆ. ರಾಜ್ಯದಲ್ಲಿ ಒಂದೊಂದು ಮುನ್ಸಿಪಾಲಿಟಿಯವರು, ನಗರ ಸಭೆಯವರು, ಮಹಾನಗರ ಸಭೆಯವರು ಒಂದೊಂದು ಧ್ವಜವನ್ನು ಹಾರಿಸಬಹುದು ಎಂದು ಎಲ್ಲಿಯೂ ಇಲ್ಲ. ಆದುದರಿಂದ ಈ ಧ್ವಜವನ್ನು ತೆಗೆಸತಕ್ಕಂಥಾದ್ದರ ಬಗ್ಗೆ ಏನಾದರೂ ಆಶ್ವಾಸನೆಯನ್ನು ಕೊಟ್ಟರೆ ವಾಟಾಳ್ ನಾಗರಾಜ್‌ರವರಿಗೆ ತೃಪ್ತಿಯಾಗಬಹುದು. ಆನಂತರ ಅವರು ತಮ್ಮ ಜಾಗಕ್ಕೆ ಬಂದು ಕುಳಿತುಕೊಳ್ಳುತ್ತಾರೆ ಎಂದು ಕಾಣುತ್ತದೆ. ಆದುದರಿಂದ ಅಂಥ ಒಂದು ಆಶ್ವಾಸನೆಯನ್ನು ಮಾನ್ಯ ಮುಖ್ಯಮಂತ್ರಿಯವರು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್:- ಈ ಬಗ್ಗೆ ನಾನು ಆಗಲೇ ಹೇಳಿದ್ದೇನಲ್ಲ?

ಶ್ರೀ ಸಿ. ಭೈರೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಸವಿಸ್ತಾರವಾಗಿ ಹೇಳಿದ್ದಾರೆ. ನಮ್ಮ ಸರಕಾರ ಅಧಿಕಾರದಲ್ಲಿದ್ದಾಗಲೂ ಈ ಪ್ರಶ್ನೆ ಬಂದಿತ್ತು. ಇದರಲ್ಲಿ ಬಹಳ ಕ್ಲಿಷ್ಟವಾದಂಥ ವಿಚಾರಗಳು ಇದರಲ್ಲಿ ಅಡಗಿರುವುದರಿಂದ ತಕ್ಷಣವೇ ಕ್ರಮ ತೆಗೆದುಕೊಳ್ಳುವುದಕ್ಕೆ ಆಗ ಆಗಿರಲಿಲ್ಲ. ಬಹುಶಃ ಈಗಲೂ ಅದೇ ಪರಿಸ್ಥಿತಿ ಇದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಈ ವಿಷಯದ ಕುರಿತು ಸರಕಾರಕ್ಕೆ ಆರ್ಥವಾಗಿದೆ; ಸರಕಾರ ಈ ಬಗ್ಗೆ ಸೂಕ್ತ ಕಾಲದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಎಂಬ ಭರವಸೆಯನ್ನೂ ಕೊಟ್ಟಿದ್ದಾರೆ. ಆದುದರಿಂದ ಮಾನ್ಯ ವಾಟಾಳ್ ನಾಗರಾಜ್‌ರವರು ಸರಕಾರದ ಮೇಲೆ ವಿಶ್ವಾಸವಿಟ್ಟು ತಮ್ಮ ಸ್ಥಾನಕ್ಕೆ ಒಂದು ಆಸೀನರಾಗಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಆ ಬಗ್ಗೆ ತಾವೂ ಕೂಡ ಒಂದು ಸೂಚನೆಯನ್ನು ಕೊಡುವುದು ಒಳ್ಳೆಯದು. ಏಕೆಂದರೆ ಕೊನೆಯ ದಿವಸದ ಅಧಿವೇಶನದಲ್ಲಿ ಸದಸ್ಯರು ಭಾವಿಯಲ್ಲಿ ಕುಳಿತು ಹೋದರು ಎಂಬ ಮಾತು ಬರುವುದು ಬೇಡವೆಂದು ಮಾನ್ಯ ಮುಖ್ಯಮಂತ್ರಿಗಳೂ ಸಹ ಹೇಳಿದ್ದಾರೆ. ಅದನ್ನು ಗಮನಿಸಿ ಅವರು ತಮ್ಮ ಸ್ಥಾನಕ್ಕೆ ಬರಬೇಕೆಂದು ವಿನಂತಿಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್:- ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಒಂದು ಸ್ಪಷ್ಟೀಕರಣವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಬೆಳಗಾಂ ಮಹಾನಗರ ಸಭೆಯವರು ಏನೊಂದು ನಿರ್ಣಯ ಮಾಡಿದ್ದರು, ಅದನ್ನು ಸರಕಾರವು ಈಗಾಗಲೇ ಸಸ್ಪೆಂಡ್ ಮಾಡಿದೆ. ಸಸ್ಪೆಂಡ್ ಆದ ಮೇಲೆ ಅದು ಕ್ಯಾನ್ಸಲೇಶನ್ ಆಗಬೇಕು. ಕ್ಯಾನ್ಸಲೇಶನ್ ಸಲುವಾಗಿ ನಾವು ಅವರಿಗೆ ಶೋಕಾಸ್ ನೋಟೀಸ್‌ನ್ನು ಕೊಟ್ಟಿದ್ದೇವೆ. ಶೋಕಾಸ್‌ನೋಟೀಸ್‌ಗೆ ಉತ್ತರ ಬಂದ ಮೇಲೆ ಕ್ಯಾನ್ಸಲೇಶನ್ ಬಗ್ಗೆ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಆದರೆ ಅವರ ನಿರ್ಣಯವನ್ನು ಈಗಾಗಲೇ ಸಸ್ಪೆಂಡ್ ಮಾಡಿದ್ದೇವೆ. ಇನ್ನು ಧ್ವಜದ ಬಗ್ಗೆ ಹೇಳಿದ್ದಾರೆ. ಅದು ನಿನ್ನೆ ಮೊನ್ನೆಯಿಂದ ಹಾರಿಸಿಕೊಂಡು ಬಂದ ಪ್ರಶ್ನೆ ಅಲ್ಲ. ಇದರ ಬಗ್ಗೆ ನಾವು ವಿಚಾರ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳಬೇಕೋ ಅಥವಾ ಕೇಂದ್ರ ಸರಕಾರದವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಮಾಡಬೇಕೋ ಎನ್ನುವಂಥಾದ್ದರ ಬಗ್ಗೆ ಸಹ ನಾನು ಗಮನ ಹರಿಸುತ್ತೇನೆ. ಇದರ ಬಗ್ಗೆ ಏನು ಮುಂದಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅವಶ್ಯವಿದೆಯೋ ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವಂಥ ಭರವಸೆಯನ್ನು ನಾನು ಕೊಡಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೇ, ಈ ಸದನ ಪ್ರಾರಂಭ ಆದಾಗಿನಿಂದ ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಕೌಜಲಗಿಯವರು, ಮಾನ್ಯ ವಾಟಾಳ್‌ನಾಗರಾಜ್‌ರವರು ಹಾಗೂ ಇತರೇ ಸದಸ್ಯರು ಸಾಕಷ್ಟು ಚರ್ಚೆ ಮಾಡಿದ್ದಾರೆ. ಸರಕಾರದವರೂ ಕೂಡ ಅನೇಕ ಭಾರಿ ಇದರ ಬಗ್ಗೆ ಗಮನಕೊಡುತ್ತೇವೆ, ಪರಿಶೀಲಿಸುತ್ತೇವೆ ಎಂದು ಉತ್ತರವನ್ನು ಕೊಡುತ್ತಾ ಬಂದಿದ್ದಾರೆ. ಸರಕಾರದವರು ಹೀಗೆ ಉತ್ತರ ಕೊಡುವುದನ್ನು ಕಡಿಮೆ ಮಾಡಿ ಈ ದಿಶೆಯಲ್ಲಿ ಕಾರ್ಯೋನ್ಮುಖರಾದರೆ ಈ ವಿಷಯ ಮುಗಿದೇ ಹೋಗುತ್ತದೆ. ಇಂದು ಕೊನೆಯ ದಿನವಾದ್ದರಿಂದ ನಾವೆಲ್ಲರೂ ಒಂದು ಸೌಹಾರ್ದ ವಾತಾವರಣದಲ್ಲಿ ನಾವು ಹೊರಗಡೆ ಹೋಗಬೇಕಾಗುತ್ತದೆ. ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ಸಮರ್ಪಕವಾದ ಉತ್ತರವನ್ನು ಕೊಡುತ್ತಾ ಇದ್ದಾರೆ. ಮಾನ್ಯ ವಾಟಾಳ್‌ನಾಗರಾಜ್ ರವರು ಈ ದಿಕ್ಕಿನಲ್ಲಿ ತಮ್ಮ ಧರಣಿಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅಂತೆಯೇ ಸರಕಾರದವರು ಕೂಡ ಈ ಬಗ್ಗೆ ಕೊಡುತ್ತಿರುವ ಆಶ್ವಾಸನೆ ಕೊನೆಯ ಆಶ್ವಾಸನೆ ಆಗಬೇಕು. ಮುಂದಿನ ಸಭೆಯಲ್ಲಿ ಮತ್ತೆ ಈ ಚರ್ಚೆಗೆ ಅವಕಾಶ ಕೊಡಬಾರದು. ಈ ದಿಕ್ಕಿನಲ್ಲಿ ಇಡೀ ಕರ್ನಾಟಕರಾಜ್ಯದ ಜನರು ನೋಡುತ್ತಾ ಇದ್ದಾರೆ. ದಯವಿಟ್ಟು ಸರಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎಂಬುದು ನನ್ನ ವಿಶ್ವಾಸ. ಮಾನ್ಯ ವಾಟಾಳ್‌ನಾಗರಾಜ್‌ರವರು ಸಹ ತಮ್ಮ ಧರಣಿಯನ್ನು ಮುಕ್ತಾಯ ಮಾಡಿ ತಮ್ಮ ಸ್ಥಾನಕ್ಕೆ ಬರಬೇಕೆಂದು ಅಪೇಕ್ಷಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಯವರು ಏನು ವಿವರಣೆಯನ್ನು ನೀಡಿದ್ದಾರೆ, ಅದರ ಆಶ್ರಯದಲ್ಲಿ ಸಾಕಷ್ಟು, ಬೆಳಗಾವಿ ಮತ್ತು ಗಡಿಪ್ರದೇಶಗಳ ಬಗ್ಗೆ ಅವರು ಏನು ಸರಕಾರದ ಕಳಕಳಿಯನ್ನು ಮತ್ತು ಸರಕಾರದ ಧೃಡ ನಿರ್ಧಾರವನ್ನು ವ್ಯಕ್ತಪಡಿಸಿದ್ದಾರೆ; ಅದರ ಆಧಾರದ ಮೇಲೆ ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ಹಿಂದಿರುಗಿ ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸ ಬೇಕೆಂದೂ ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಈಗ ವಿಧೇಯಕವನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು.

ಶ್ರೀ ಸಿ. ಭೈರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಅದಕ್ಕೆ ಉತ್ತರ ಬರಲಿಲ್ಲ. ನಾನು ಅದಕ್ಕೆ ಉತ್ತರ ಬೇಕೆಂದು ಅಪೇಕ್ಷೆ ಮಾಡುತ್ತಾ ಇಲ್ಲ ಆದರೂ ವಿಷಯ ಏನೆಂದು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಸಚಿವರು ಹೇಗೂ ಇಲ್ಲಿ ಇದ್ದಾರೆ ಅವರು ಉತ್ತರ ಕೊಡುವಾಗ ಅವರ ಗಮನಕ್ಕೂ ಇದನ್ನು ನಾನು ತಂದಿದ್ದೆ ಮತ್ತು ಮುಖ್ಯ ಮಂತ್ರಿಗಳ ಗಮನಕ್ಕೂ ತಂದಿದ್ದೆ. ವಿಷಯವೇನೆಂದರೆ, ಎಕ್ಸೈಜ್ ಕಂಟ್ರಾಕ್ಟರ್ಸ್ ಮೂರು ತಿಂಗಳ ಬ್ಯಾಂಕ್ ಗ್ಯಾರಂಟಿ ಕೊಡಬೇಕೆಂದು ಕಾನೂನು ಇದೆ. ಈ ಗ್ಯಾರಂಟಿ ಕೊಡಲು 15 ದಿವಸಗಳ ಅವಕಾಶ ಕೊಟ್ಟಿದ್ದಾರೆ. ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಇದರಿಂದ ಸರ್ಕಾರದ ಖಜಾನೆಗೆ ಹೆಚ್ಚಿನ ಹಣ ಬರುತ್ತದೆಂದರೆ ಸಂತೋಷ. ಆದರೆ ಅವರು 15 ದಿವಸವಾದರೂ ಕೊಟ್ಟಿಲ್ಲ. ಮೊನ್ನೆವರೆಗೆ 104 ಇಲ್ಲವೇ 105 ಜನರು ಕೊಟ್ಟಿರಬಹುದು. ಇನ್ನುಳಿದವರು ಕೊಟ್ಟಿಲ್ಲ.

ಅಧ್ಯಕ್ಷರು:- ಇಲ್ಲಿ ಚರ್ಚೆಗೆ ಬೇಕಾದಷ್ಟು ವಿಚಾರಗಳಿವೆ ಆದರಿಂದ ಇದು ಸಾಕು.

ಶ್ರೀ ಸಿ. ಭೈರೇಗೌಡ:- ಅವರು ಇದನ್ನು ಕೊಡಲು ಯಾವರೀತಿ ತಪ್ಪಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ ಎಂದರೆ, ಕೊರಟಗೆರೆ ತಾಲೂಕಿನಲ್ಲಿ ಒಬ್ಬ ಕಂಟ್ರಾಕ್ಟರ್ ಅನ್ನು ಮೊಂಟಲಿ ಸರಿ ಇಲ್ಲ ಎಂದು ಮೆಂಟಲ್ ಆಸ್ಪತ್ರೆಲಿ ಅಡ್ಮಿಟ್ ಮಾಡಿದ್ದಾರೆ.

ಅಧ್ಯಕ್ಷರು:- ಅವರ ತಲೆ ಕೆಟ್ಟರೆ ಇನ್ನೆಲ್ಲಿಗೆ ಸೇರಿಸಬೇಕೆಂದು ಹೇಳುತ್ತೀರಿ?

ಶ್ರೀ ಸಿ. ಭೈರೇಗೌಡ:- ನಿಜವಾಗಿಯೂ ತಲೆಕೆಟ್ಟಿದ್ದರೆ ನನ್ನ ಆಕ್ಷೇಪಣೆ ಇರುತ್ತಿರಲಿಲ್ಲ. ಆದರೆ ತಲೆ ಸರಿಯಾಗಿದ್ದರೂ ಕೂಡ ಸರ್ಕಾರಕ್ಕೆ ಕೊಡುವ ಆದಾಯ ತಪ್ಪಿಸಬೇಕೆಂಬ ದೃಷ್ಟಿಯಿಂದ ಈ ರೀತಿ ಸೇರಿಸಿದ್ದಾರೆ. ಅವರಿಗೆ ಕೊಡಲಾಗಿದ್ದ 15 ದಿವಸ ಅವಧಿ ಮುಗಿದಿದೆ. ಆದ್ದರಿಂದ ಇನ್ನು ಮುಂದಕ್ಕೆ ಆ ಕಂಟ್ರಾಕ್ಟರ್ ಲೈಸೆನ್ಸ್ ಕ್ಯಾನ್ಸಲ್ ಮಾಡಿ ಸರ್ಕಾರಕ್ಕೆ ಬರುವ ಆದಾಯವನ್ನು ಯಾವರೀತಿ ರಕ್ಷಣೆ ಮಾಡುತ್ತಾರೆಂಬುದನ್ನು ತಿಳಿಸಬೇಕು.

ಅಧ್ಯಕ್ಷರು:- ಈಗ ಆಬ್ಕಾರಿ ಸಚಿವರು ಉತ್ತರಿಸುವರು, ಹಾಗೆಯೇ ಆರೋಗ್ಯ ಸಚಿವರನ್ನೂ ಸಹ ಸಭೆಗೆ ಕರೆಸುತ್ತೇನೆ. ಏಕೆಂದರೆ ತಾವು ಹೇಳಿದ ತಲೆ ಕೆಟ್ಟ ರೋಗಿಯ ಬಗ್ಗೆ ವಿಚಾರಿಸಲಿಕ್ಕೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಭೈರೇಗೌಡರು ಸಾಕಷ್ಟು ತಿಳಿದುಕೊಂಡಿದ್ದಾರೆ. ಆದ್ದರಿಂದ ಅವರಿಗೆ ಆಬಕಾರಿ ಖಾತೆ ಕೊಡಬಹುದು ಅಥವಾ ಅವರಿಗೆ ಏನಾದರೊಂದು ಕೊಡುವ ಬಗ್ಗೆ ಆಲೋಚನೆ ಮಾಡಿ.

ಅಧ್ಯಕ್ಷರು:- ನಿಮ್ಮ ಮಾತು ನಡೆಯುತ್ತಿದ್ದಾಗ ಅವರಿಗೆ ನೀವು ಏನೂ ಮಾಡಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಅವರು ಮಾಡಿದ ಕೆಲಸಕ್ಕೆ ಪ್ರತಿಫಲ ಕೂಡ ಕೊಡಲಿಲ್ಲ

ಅಧ್ಯಕ್ಷರು:- ಹೌದು.

ಶ್ರೀ ಎಂ. ರಾಜಶೇಖರಮೂರ್ತಿ:- ಮಾನ್ಯ ಅಧ್ಯಕ್ಷರೇ, ನಿನ್ನೆ ಮಧ್ಯಾಹ್ನದವರೆಗೆ 125 ಬಂದಿದೆ. ಈಗ ಬ್ಯಾಂಕ್ ಗ್ಯಾರಂಟಿಗಳು ಬರುತ್ತಿವೆ. ಅಮೌಂಟ್ ಜಾಸ್ತಿ ಇರುವುದರಿಂದ ಕೆಲವು ಬ್ಯಾಂಕ್‌ಗಳವರು ಕನ್‌ಸಾರ್ಟಿಯಮ್ ಮಾಡಿಕೊಂಡು ಒಬ್ಬರಿಗೊಬ್ಬರು ಮಾತನಾಡಿಕೊಂಡು